Don't take down. Don't take down. xxx ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ. Don't take down. ಯಾವುದಕ್ಕೂ ಒಂದು ಲಿಮಿಟ್ ಇರಬೇಕು. ತಾವು ಮಾತನಾಡಬೇಡಿ. ನನ್ನ ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆ. ಎರಡೂ ಕಡೆ ನಾನು ಕೇಳಿ ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ Don't take down anything. Don't take down.

ಗೊಂದಲ

Mr. Speaker: Don't take down. This not a discussion. I have reserved my ruling. I have reserved my ruling. You must not talk now.

(INTERRUPTIONS)

MR. Speaker: Don't take down. Don't take down. And it won't go to Press also. Because, ರೂಲಿಂಗ್ ಕೊಟ್ಟು ಆದ ಮೇಲೆ ಪ್ರೆಸ್‌ಗೆ ಎನೂ ಹೋಗುವುದಿಲ್ಲ. ಅವರು ಎನೇ ಮಾತನಾಡಲಿ. Don't take down. Don't take down.

ಗೊಂದಲ

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಸುಮ್ಮನೆ ಇರಬೇಕು. ದಯವಿಟ್ಟು ಸುಮ್ಮನೆ ಇರಬೇಕು. ತಾವು ದಯವಿಟ್ಟು ಸುಮ್ಮನೆ ಇರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ. ತಾವು ದಯವಿಟ್ಟು ಸುಮ್ಮನೆ ಇರಬೇಕು. ನಾನು ರೂಲಿಂಗ್ ಕೊಟ್ಟು ಆಗಿದೆ. ನನ್ನ ರೂಲಿಂಗ್‌ನ್ನು ನಾನು ಕಾಯ್ದಿರಿಸಿದ್ದೇನೆ. ನಾನು ಎರಡೂ ಕಡೆ ಕೇಳಿದ್ದೇನೆ. ತಾವು ನಿಲ್ಲಿಸುತ್ತೀರೋ ಇಲ್ಲವೋ? ನಮ್ಮ ಮುಂದೆ ಅಜಂಡಾ ಇದೆ ನಾನು ಆ ಅಜೆಂಡಾವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ತಮಗೆ ಮೊದಲೇ ಹೇಳುತ್ತಿದ್ದೇನೆ. ಅಜೆಂಡಾದಲ್ಲಿರುವ ಸಬ್ಜೆಕ್ಟ್‌ಗಳನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ. ನಾನು ನನ್ನ ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆಂದು ಹೇಳಿದ ಮೇಲೂ ತಾವು ಮಾತನಾಡಲು ಹಕ್ಕು ಇಲ್ಲ. ನೀವು ಮಾತನಾಡುವುದಕ್ಕೆ

ಆಗುದಿಲ್ಲ. ನಾನು ಅಜೆಂಡಾ ಪ್ರಕಾರ ಮುಂದಿನ ಸಬ್ಜೆಕ್ಟ್‌ಗಳನ್ನು ಕರೆಯುತ್ತೇನೆ. ಮಾನ್ಯ ಆರ್.ವಿ. ದೇಶಪಾಂಡೆಯವರೇ ಈಗ ನಾನು ವಿಧೇಯಕಗಳನ್ನು ತೆಗೆದುಕೊಳ್ಳುತ್ತೇನೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ವಿಧೇಯಕವನ್ನು ಮಂಡಿಸಿ.

ಗೊಂದಲ

2. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(i) 2 ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕ, 2003

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಆರ್.ವಿ.ದೇಶಪಾಂಡೆ: (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೇ, 2003ರ ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

(xxx, ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಿರುವುದಿಲ್ಲ.)

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2003ರ ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 26ರವರೆಗೆ; ಎರಡೂ ಸೇರಿದಂತೆ,

ಅಧ್ಯಕ್ಷರು ಪ್ರಸ್ತಾವ ಏನೆಂದರೆ: ಖಂಡ 2 ರಿಂದ 26ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 26ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರ: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡು ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪ ಅಂಗೀಕಾರ

ಶ್ರೀ ಆರ್.ವಿ.ದೇಶಪಾಂಡೆ: (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೇ " 2003ರ ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು: ಪ್ರಸ್ತಾವ ಏನೆಂದರೆ " 2003ರ ಕರ್ನಾಟಕ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕವನ್ನು ಅಂಗೀಕರಿಸುವುದು". ಪ್ರಸ್ತಾವ ಅಂಗೀಕರಿಸ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಗೊಂದಲ

(ii) ಕರ್ನಾಟಕ ಸ್ಥಳೀಯ ನಿಧಿ ಪಾಧಿಕಾರಗಳ ಆರ್ಥಿಕ ಹೊಣೆಗಾರಿಕೆ

ವಿಧೇಯಕ – 2003

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ, " 2003ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಗೊಂದಲ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

" 2003ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 11ರ ವರೆಗೆ, ಎರಡೂ ಸೇರಿದಂತೆ,

ಅಧ್ಯಕ್ಷರು: ಪ್ರಸ್ತಾವ ಏನೆಂದರೆ " ಖಂಡ 2 ರಿಂದ 11 ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 11 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ, " 2003ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೆನೆ ".

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" 2003ರ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ವೈದ್ಯಕೀಯ ನೊಂದಣಿ (ತಿದ್ದುಪಡಿ) ವಿಧೇಯಕ, 2003

ಪರ್ಯಾಲೋಚನಾ ಪ್ರಸ್ತಾವ

ಡಾ ಎ.ಬಿ.ಮಾಲಕರೆಡ್ಡಿ (ವೈದ್ಯ ಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ' '2003 ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋವಚಿಸಬೇಕೆಂದು ಕೋರುತ್ತೇನೆ ".

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

" 2003ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 8ರ. ವರೆಗೆ; ಎರಡೂ ಸೇರಿದಂತೆ,

ಅಧ್ಯಕ್ಷರು ಪ್ರಸ್ತಾವ ಏನೆಂದರೆ: ಖಂಡ 2 ರಿಂದ 8ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8ರ ವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 9ಕ್ಕೆ ತಿದ್ದುಪಡಿ:

ಡಾ ಎ.ಬಿ.ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 9ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಖಂಡ - 9

" ಸದರಿ ವಿಧೇಯಕದ 9ನೇ ಖಂಡದಲ್ಲಿ, ಪ್ರಕರಣ 16ರ ಖಂಡ (ಡಿ) ಬದಲಾಗಿ ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ: " (ಡಿ) ಸರ್ಕಾರಿ ಆಸ್ಪತ್ರೆಯೂ ಸೇರಿದಂತೆ ಆಸ್ಪತ್ರೆ, ನರ್ಸಿಂಗ್ ಹೋಂಗಳು, ಸಮಾಲೋಚನಾ ಕೊಠಡಿಗಳು, ರೋಗನಿದಾನ ಕೇಂದ್ರಗಳು, ಪಾಲಿಕ್ಲಿನಿಕ್‌ಗಳು ಚಿಕಿತ್ಸಾಲಯಗಳು, ಯಾವುದೇ ಹೆಸರಿನಿಂದ ಕರೆಯಲ್ಪಡುವ ವೈದ್ಯಕೀಯ ವೃತ್ತಿಯನ್ನು ನಡೆಸುವ ಆರೋಗ್ಯ ಮತ್ತು ಆರೈಕೆ ಕೇಂದ್ರಗಳು ಮುಂತಾದ ವೈದ್ಯಕೀಯ ಸಂಸ್ಥೆಗಳನ್ನು ತಪಾಸಣೆ ಮಾಡುವುದು"

ಪರಂತು ಲಿಖಿತ ದೂರಿಲ್ಲದೆ ಯಾವುದೇ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆ ಅಥವಾ ವೈದ್ಯಕೀಯ ವಿದ್ಯಾಲಯದ ಭೋದಕ ಆಸ್ಪತ್ರೆಯ ತಪಾಸಣೆಯನ್ನು ಮಾಡತಕ್ಕದ್ದಲ್ಲ"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" ಸದರಿ ವಿಧೇಯಕದ 9ನೇ ಖಂಡದಲ್ಲಿ, ಪ್ರಕರಣ 16ರ ಖಂಡ (ಡಿ) ಬದಲಾಗಿ ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

" (ಡಿ) ಸರ್ಕಾರಿ ಆಸ್ಪತ್ರೆಯೂ ಸೇರಿದಂತೆ ಆಸ್ಪತ್ರೆ, ನರ್ಸಿಗೆ ಹೋಂಗಳು, ಸಮಾಲೋಚನಾ ಕೊಠಡಿಗಳು, ರೋಗನಿದಾನ ಕೇಂದ್ರಗಳು, ಪಾಲಿ ಕ್ಲಿನಿಕ್‌ಗಳು, ಚಿಕಿತ್ಸಾಲಯಗಳು, ಯಾವುದೇ ಹೆಸರಿನಿಂದ ಕರೆಯಲ್ಪಡುವ ವೈದ್ಯಕೀಯ ವೃತ್ತಿಯನ್ನು ನಡೆಸುವ ಆರೋಗ್ಯ ಮತ್ತು ಆರೈಕೆ ಕೇಂದ್ರಗಳು ಮುಂತಾದ ವೈದ್ಯಕೀಯ ಸಂಸ್ಥೆಗಳನ್ನು ತಪಾಸಣೆ ಮಾಡುವುದು.

ಪರಂತು ಲಿಖಿತ ದೂರಿಲ್ಲದೆ ಯಾವುದೇ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆ ಅಥವಾ ವೈದ್ಯಕೀಯ ವಿದ್ಯಾಲಯದ ಭೋಧಕ ಆಸ್ಪತ್ರೆಯ ತಪಾಸಣೆಯನ್ನು ಮಾಡತಕ್ಕದ್ದಲ್ಲ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 9 ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" ಖಂಡ 9 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ "

(ಪಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 9 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 10 ರಿಂದ 13ರ ವರೆಗೆ: ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ:

ಅಧ್ಯಕ್ಷರು: ಖಂಡ 10 ರಿಂದ 13 ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 10 ರಿಂದ 13 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಪಟ್ಟಿತು)

(ಪ್ರಸ್ತಾಪದ ಅಂಗೀಕಾರ)

ಡಾ ಎ.ಬಿ.ಮಾಲಕರೆಡ್ಡಿ: (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, "2003ರ ಕರ್ನಾಟಕ ವೈದ್ಯಕೀಯ ನೊಂದಣಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" 2003ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(iv) ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕ 2003

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು): (ಮಾನ್ಯ ಜಲ ಸಂಪನ್ಮೂಲ ಸಚಿವರು ಪರವಾಗಿ): ಮಾನ್ಯ ಅಧ್ಯಕ್ಷರೇ, " ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2003ರ ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಗೊಂದಲ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

" ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2003ನೇ ಸಾಲಿನ ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಗೊಂದಲ

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ:

ಅಧ್ಯಕ್ಷರು: ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3ರ ವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): (ಮಾನ್ಯ **ಜಲಸಂಪನ್ಮೂಲ ಸಚಿವರು ಪರವಾಗಿ):** ಮಾನ್ಯ ಅಧ್ಯಕ್ಷೆರೇ, " ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2003ನೇ ಸಾಲಿನ ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

" ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2003ನೇ ಸಾಲಿನ ಕರ್ನಾಟಕ ನೀರಾವರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ – 2002

(ತಿದ್ದುಪಡಿ ವಿಧೇಯಕವನ್ನು ಹಿಂತೆಗೆದುಕೊಳ್ಳಲು ಅನುಮತಿ)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು)ರವರ ಪರವಾಗಿ ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು " ದಿನಾಂಕ 04–03–03 ರಂದು ವಿಧಾನಸಭೆಯಲ್ಲಿ ಮಂಡಿಸಲಾಗಿರುವ 2002ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಹಿಂತೆಗೆದುಕೊಳ್ಳಲು ಈ ಸಭೆಯು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ".

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, " ದಿನಾಂಕ 04–03–03 ರಂದು ವಿಧಾನಸಭೆಯಲ್ಲಿ ಮಂಡಿಸಲಾಗಿರುವ 2002ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಮಾನ್ಯ ಸಚಿವರು ಹಿಂತೆಗೆದುಕೊಳ್ಳಲು ಅನುಮತಿ ನೀಡುವುದು"

(ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಮಾನ್ಯ ಸಚಿವರು ದಿನಾಂಕ 04–03–03 ರಂದು ವಿಧಾನಸಭೆಯಲ್ಲಿ ಮಂಡಿಸಲಾಗಿರುವ 2002ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಯಿತು)

ಅಧ್ಯಕ್ಷರು: ನೀವು ಮಾತ್ರ ವಿರೋಧಪಕ್ಷದವರೇ? ಅವರೂ ವಿರೋಧಪಕ್ಷ ಅಲ್ಲವೇ? ಹೇಳಿ..

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಇದು ಸಭೆ ನಡೆಸುವ ರೀತಿಯೇ? ಇಲ್ಲಿ ನಮಗೆ ಸಮಸ್ಯೆಗಳಿಗೆ ಸ್ಪಷ್ಟೀಕರಣ ಕೇಳುವ ಅವಕಾಶವೂ ಇಲ್ಲವೇ? ಹಾಗಾದರೆ....

ಗೊಂದಲ

ಅಧ್ಯಕ್ಷರು: ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.x

ಗೊಂದಲ

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಇದು ಸರ್ವಾಧಿಕಾರವೇ ಮಾನ್ಯ ಅಧ್ಯಕ್ಷರೇ? ಇದು ಸರ್ವಾಧಿಕಾರದ ಪರಮಾವಧಿ..

ಅಧ್ಯಕ್ಷರು: ಸೋಮಶೇಖರ್‌ರವರು ಹೇಳಿ..

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಇವೊತ್ತು.. ಈ ದಿನ ಈ ಶಾಸನಸಭೆಯ ಇತಿಹಾಸದಲ್ಲಿ ನಮ್ಮ ಹಕ್ಕುಗಳಿಗೆ x

ಗೊಂದಲ

ಅದು ಹೇಗೆ ಎಂದು ನಾನು ಹೇಳುತ್ತೇನೆ.. ಮಾನ್ಯ ಸಭಾಧ್ಯಕ್ಷರೇ, ನೀವು ನಮಗೆ ಅವಕಾಶವನ್ನು ಕೊಟ್ಟಿಲ್ಲ.. ನೀವು ನಮ್ಮ ರಕ್ಷಣೆಗೆ ಬರುತ್ತಾ ಇಲ್ಲ.

ಗೊಂದಲ

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ... ಈ ತರಹ ಪ್ರಪಂಚದಲ್ಲಿ ನಾನು ಎಲ್ಲಿಯೂ ನೋಡಿಲ್ಲ. ಅರ್ಥವಾಯಿತೆ? ರೂಲಿಂಗ್ ಕೊಟ್ಟಾದ ಮೇಲೆ, ...

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ಇದು ಕೇವಲ ಎರಡು ಪಕ್ಷದ ಸಭೆಯಲ್ಲ..

ಅಧ್ಯಕ್ಷರು: ನಮ್ಮ ಸ್ಥಾನದಲ್ಲಿದ್ದುಕೊಂಡು ಕೊಟ್ಟ ರೂಲಿಂಗ್ ಮೇಲೆ ನಿಮಗೆ ಗೌರವವಿಲ್ಲವಲ್ಲಾ? ಅಧ್ಯಕ್ಷರು ರೂಲಿಂಗ್ ಕೊಟ್ಟಾದ ಮೇಲೆಯೂ ಅದರ ಬಗ್ಗೆ ನಿಮಗೆ ಗೌರವವಿಲ್ಲವಲ್ಲ?

ಶ್ರೀ ಜಗದೀಶ್ ಶೆಟ್ಟರ್: ಹಾಗಾದರೆ ನಾವು ಸ್ಪಷ್ಟೀಕರಣವನ್ನೂ ಕೇಳಬಾರದೇ?

ಗೊಂದಲ

ಅಧ್ಯಕ್ಷರು: ನೀವು 35 ಜನ ಸದಸ್ಯರಿದ್ದೀರಿ.. ಅವರುಗಳು 185 ಜನ ಸದಸ್ಯರುಗಳಿದ್ದಾರೆ. ಅವರುಗಳು ಕೊಡುವ ಅಭಿಪ್ರಾಯಕ್ಕೂ ಗೌರವ ಇರಬೇಕು. ನೀವುಗಳು ಹೀಗೆ ಮಾಡಬಾರದು.. ಹೀಗೆ 35 ಜನ ಇದ್ದುಕೊಂಡು ಹೀಗೆ ಮಾಡುವುದನ್ನು ನಾನು ಎಲ್ಲಿಯೂ ನೋಡಿಲ್ಲ.. ಅವರು ಶೇಕಡ 80ರಷ್ಟು ಇದ್ದಾರೆ. I am very sorry.. ನೀವು 35 ಜನರು ಎನ್‌ಟೈರ್ ಸಭೆಯನ್ನು ಅಡ್ಡಿಪಡಿಸುತ್ತಿದ್ದೀರಿ...

ಗೊಂದಲ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಸದಸ್ಯರು ತಮ್ಮಿಂದ ನಿರೀಕ್ಷೆ ಮಾಡತಕ್ಕಂಥ ರ'ಕ್ಷಣೆ ಏನು? ಸ'ನ'ದ

(x ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.)

ಕಾರ್ಯಕಲಾಪಗಳ ಪುಸ್ತಕವನ್ನು ಹರಿದು ಹಾಕುವುದು ಸರಿಯಲ್ಲ. ಮೊದಲು ಅವರು ಸಭಾಧ್ಯಕ್ಷರಿಗೆ ಗೌರವವನ್ನು ಕೊಡಬೇಕು. ಹೀಗೆ ಅಗೌರವವನ್ನು ಕೊಡತಕ್ಕಂಥಾದ್ದನ್ನು ಬೆಡಬೇಕು. ಇದು ಕ್ಷಮೆ ಕೊಡತಕ್ಕಂಥ ವಿಚಾರವಲ್ಲ. ಮಾನ್ಯ ಸದಸ್ಯರುಗಳು ಹೇಳಿದ್ದು ರೆಕಾರ್ಡ್‌ನಲ್ಲಿ ಹೋಗಿದೆ. ಅದನ್ನು ಕಡತದಿಂದ ತೆಗೆದು ಹಾಕಿಸಿಬೇಕು.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಈಗ ಏನು ಅಗೌರವದ ರೀತಿಯಲ್ಲಿ ಚರ್ಚೆಯಾಗಿದೆ ಅದು ಯಾವುದೂ ರೆಕಾರ್ಡ್‌ಗೆ ಹೋಗುವ ಹಾಗಿಲ್ಲ. it should not go for record. ಅವರು ಹೊರಗಡೆ ಹೋಗಿ ನ್ಯೂಸ್‌ಕ್ರಿಯೇಟ್ ಮಾಡುವುದಕ್ಕೆ ಹೊರತಾಗಿ ಇನ್‌ಫಾರ್ಮೇಷನ್‌ಗಾಗಿ ಚರ್ಚೆಮಾಡುತ್ತಿಲ್ಲ. You must direct that such things should not happen. ನಾವು ಎಲ್ಲರೂ ಶಾಂತ ರೀತಿಯಿಂದ ಕೇಳಿಕೊಂಡಿದ್ದೇವೆ. ಉತ್ತರವನ್ನು ಕೊಟ್ಟಿದ್ದೇವೆ. ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಯಾವ ದೇಶದಲ್ಲಿ ಯಾವ ರೂಲ್‌ಗಳ ಅಡಿಯಲ್ಲಿ ಕ್ಲಾರಿಫಿಕೇಶನ್ ಕೇಳುವುದಕ್ಕೆ ಸಾಧ್ಯ ಇದೆ ಸ್ವಾಮಿ?

ಅಧ್ಯಕ್ಷರು: ಅಂಥ ನಿಯಮಗಳು ಯಾವೊತ್ತೂ ಇಲ್ಲ. ಅದರಲ್ಲೂ 35 ಜನರು 185 ಜನರ ಹಕ್ಕುಗಳನ್ನು ಮೊಟಕು ಮಾಡುತ್ತಿದ್ದೀರಲ್ಲ? 35 ಜನರು ಕೂಡಿ ಅವರ ಹಕ್ಕುಗಳನ್ನು ಮೊಟಕು ಮಾಡುತ್ತಿದ್ದೀರಲ್ಲಾ? ನಿಮಗೇನು ಅಧಿಕಾರವಿದೆ? Come on tell me. No,you have no right. 185 ಜನರು ಹಕ್ಕನ್ನು ಮೊಟಕು ಮಾಡುವ ನಿಮ್ಮ ಕ್ರಮಗಳು ಪ್ರಜಾಪ್ರಭುತ್ವವಲ್ಲ. ಹೀಗೆ ಮಾಡುವುದು ವಿರೋಧಪಕ್ಷದವರು ನಡವಳಿಕೆಯಲ್ಲ.

ಗೊಂದಲ

ಶ್ರೀ ಜಗದೀಶ ಶೆಟ್ಟರ್: ಮೆಜಾರಿಟಿ ಇದೆಯೆಂದು ಹೀಗೆಯೇ ನಡೆಸಿಕೊಂಡು ಹೋಗುವುದೇ?

ಗೊಂದಲ

ಅಧ್ಯಕ್ಷರು: ಇವೊತ್ತಿನ ದಿವಸ ಈ ಅರ್ಧ ಘಂಟೆಯಿಂದ ಗಲಾಟೆಗಳು ಏನು ಶುರುವಾಯಿತಲ್ಲಾ ಅದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆ ಬಿಲ್ ಪಾಸ್ ಆದದ್ದು ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ಬಿಲ್ಲನ್ನು ಹೇಗೆ ಪಾಸ್ ಮಾಡಿದ್ದೀರಿ? ಬಿಲ್ ಪಾಸ್ ಆಗಿಲ್ಲ.... ಬಿಲ್ ಪಾಸ್ ಆದುದು ರೆಕಾರ್ಡ್ ಆಗಿಲ್ಲ.

ಅಧ್ಯಕ್ಷರು: ಆ ಗಲಾಟೆ ಮಾತ್ರ ರೆಕಾರ್ಡ್‌ಗೆ ಹೋಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಬಿಲ್‌ಗಳು ಪಾಸಾಗಿವೆ ಹಾಗೂ ರೆಕಾರ್ಡ್‌ಗೆ ಹೋಗಿರುತ್ತವೆ. ಈ ದಿನ ಸಭೆಯಲ್ಲಿ ಏನು ನಡೆಯಿತಲ್ಲಾ ಇದನ್ನು ಜನರು ಯಾವ ರೀತಿಯಲ್ಲಿ ಮೆಚ್ಚುತ್ತಾರೋ ದೇವರೇ ಬಲ್ಲರು. ಅರ್ಥವಾಯಿತೇ? 35 ಜನರು 185 ಜನರ ಹಕ್ಕನ್ನು ಮೊಟಕುಗೊಳಿಸುತ್ತಿದ್ದಾರೆಂದು ನಾನು ಹೇಳಿದ್ದೇನಲ್ಲಾ? ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

3. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೆಯ ವಿಧಾನಸಭೆಯ ಆರನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ 9ನೇ ಜುಲೈ, 2003 ರಂದು ಸಮಾವೇಶಗೊಂಡು, ದಿನಾಂಕ 8ನೇ ಆಗಸ್ಟ್, 2003 ರವರೆಗೆ